# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 341 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12/07/2018 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಳಗಾವಿಯ ಸುವರ್ಣ ವಿಧಾನಸೌಧವನ್ನು ಯಾವ ವರ್ಷ, ಎಷ್ಟು ವೆಚ್ಚದಲ್ಲಿ, ಯಾವ ಸರ್ಕಾರದ ಅವಧಿಯಲ್ಲಿ, ಯಾವ ಕಾರಣಗಳಿಗಾಗಿ ನಿರ್ಮಿಸಲಾಯಿತು; | ಬೆಳಗಾವಿಯಲ್ಲಿ ಸುವರ್ಣವಿಧಾನಸೌಧ ಕಟ್ಟಡವನ್ನು ಜುಲೈ-2009 ರಲ್ಲಿ ಪ್ರಾರಂಭಿಸಿ ನವೆಂಬರ್-2012 ರಲ್ಲಿ ಒಟ್ಟು ರೂ.438.04 ಕೋಟಿಗಳ ವೆಚ್ಚದಡಿ ನಿರ್ಮಿಸಲಾಗಿರುತ್ತದೆ. ಪ್ರತಿ ವರ್ಷವೂ ಬೆಳಗಾವಿಯಲ್ಲಿ ಚಳಿಗಾಲದ ವಿಧಾನ ಮಂಡಲದ ಅಧಿವೇಶನವನ್ನು ನಡೆಸುವ ನಿಮಿತ್ತವಾಗಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದಿದ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ. |
| ಆ | ಇದರ ನಿರ್ವಹಣೆಗಾಗಿ ಇದುವರೆಗೂ ತಗುಲಿದ ವೆಚ್ಚವೆಷ್ಟು? (ವರ್ಷವಾರು ಪೂರ್ಣ ವಿವರಗಳನ್ನು ನೀಡುವದು) | ಲೋಕೋಪಯೋಗಿ ಇಲಾಖೆಯಿಂದ ಸುವರ್ಣಸೌಧ ಕಟ್ಟಡದ, ಉದ್ಯಾನವನದ, ನೀರು ಸರಬರಾಜು ಬಿಲ್ಲು ಹಾಗೂ ವಿದ್ಯುತ್ ಬಿಲ್ಲು ಮತ್ತು ವಿದ್ಯುತ್ ಪರಿಕರಗಳ ಕುರಿತಾಗಿ ಭರಿಸಲಾಗಿರುವ ನಿರ್ವಹಣಾ ವೆಚ್ಚದ ವರ್ಷವಾರು ವಿವರಗಳು ಈ ಕೆಳಗಿನಂತಿವೆ. |

| ಕ್ರ ಸಂ | ವರ್ಷ | ಭರಿಸಲಾದ ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|
| 1 | 2013–14 | 1.69 |
| 2 | 2014–15 | 4.37 |
| 3 | 2015–16 | 4.00 |
| 4 | 2016–17 | 4.43 |
| 5 | 2017–18 | 4.39 |
| | ಒಟ್ಟು | 18.88 ಕೋಟಿ |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಇ | ಬೆಳಗಾವಿ ಸುವರ್ಣ ವಿಧಾನಸೌಧವನ್ನು ಉದ್ದೇಶಿತ ಕಾರ್ಯಗಳಿಗಾಗಿ ಸದ್ಬಳಕೆ ಮಾಡಿಕೊಳ್ಳುವಲ್ಲಿ ಸರ್ಕಾರವು ವಿಫಲಗೊಂಡಿರುವದು ನಿಜವೇ; | ಇಲ್ಲ |

| | | |
|---|---|---|
| ಈ | ಅನಾವಶ್ಯಕವಾಗಿ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ- ನಿರ್ವಹಿಸುತ್ತಿರುವ ಸರ್ಕಾರಿ ಕಚೇರಿಗಳನ್ನು ಈ ಕಟ್ಟಡಕ್ಕೆ ಸ್ಥಳಾಂತರಿಸುವಲ್ಲಿ ಸರ್ಕಾರಕ್ಕಿರುವ ಅಡಚಣೆಗಳೇನು; | ಬೆಳಗಾವಿಯ ಸುವರ್ಣಸೌದ ಕಟ್ಟಡಕ್ಕೆ ಸರ್ಕಾರಿ ಕಛೇರಿಗಳನ್ನು ಖಾಯಂ ಆಗಿ ಸ್ಥಳಾಂತರಿಸಿದಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಸ್ಥಳಾವಕಾಶದ ಕೊರತೆ ಉಂಟಾಗುತ್ತದೆ. ಅಲ್ಲದೆ ಸುವರ್ಣ ಸೌಧ ಕಟ್ಟಡದಲ್ಲಿ ಯಾವುದೇ ಕಛೇರಿಗಳು ಕಾರ್ಯನಿರ್ವಹಿಸದೇ ಇದ್ದಾಗ್ಯೂ ಸಹ ವಿಧಾನಮಂಡಲದ ಅಧಿವೇಶನದ ಸಂದರ್ಭದಲ್ಲಿ ಸ್ಥಳಾವಕಾಶದ ಅಭಾವ ಉಂಟಾಗುತ್ತಿದೆ. ಆದ ಕಾರಣ ಯಾವುದೇ ಸರ್ಕಾರಿ ಕಚೇರಿಗಳನ್ನು ಶಾಶ್ವತವಾಗಿ ಬೆಳಗಾವಿಯ ಸುವರ್ಣ ಸೌಧ ಕಟ್ಟಡಕ್ಕೆ ಸ್ಥಳಾಂತರಿಸಲು ಸಾಧ್ಯವಾಗುತ್ತಿಲ್ಲ.<br>ಸರ್ಕಾರದ ಆದೇಶ ಸಂ. ಸಿಆಸುಇ 84 ಡಿಬಿಎಂ 2012 ಬೆಂಗಳೂರು ದಿನಾಂಕ: 25.3.2014 ರಡಿ ಬೆಳಗಾವಿ ಸುವರ್ಣಸೌಧ ಕಟ್ಟಡಕ್ಕೆ ಯಾವುದೇ ಕಚೇರಿಗಳನ್ನು ಖಾಯಂ ಆಗಿ ಸ್ಥಳಾಂತರಿಸುವ ಅಗತ್ಯವಿಲ್ಲವೆಂದು ಆದೇಶಿಸಲಾಗಿರುತ್ತದೆ. |
| ಉ | ಕನಿಷ್ಠ ಪಕ್ಷ ಎರಡು ಮೂರು ತಿಂಗಳಿಗೊಮ್ಮೆಯಾದರೂ ಇಲ್ಲಿ ಸಚಿವ ಸಂಪುಟದ ಸಭೆಗಳನ್ನು ಜರುಗಿಸುವುದಲ್ಲದೆ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ನಿವಾರಣೆಗಾಗಿ ಸಚಿವರುಗಳ ಸಭೆ, ಜನಸಂಪರ್ಕ ಸಭೆಗಳನ್ನು ಏರ್ಪಡಿಸಲಾಗುವುದೇ; | ವಿಧಾನ ಸೌಧದಲ್ಲಿ ಸಾಮಾನ್ಯವಾಗಿ ಸಚಿವ ಸಂಪುಟ ಸಭೆಗಳು ನಡೆಯುತ್ತಿದ್ದು, ಬೆಳಗಾವಿಯ ಸುವರ್ಣಸೌಧದಲ್ಲಿ ಅಧಿವೇಶನ ನಡೆಯುವ ವೇಳೆಯಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಚಿವ ಸಂಪುಟದ ಸಭೆ, ಸಚಿವ ಸಂಪುಟದ ಉಪ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದೆ. |
| ಊ | ಸುವರ್ಣ ವಿಧಾನಸೌಧದ ನಿರ್ವಹಣಾ ವೆಚ್ಚಗಳನ್ನು ತಗ್ಗಿಸಲು ಸೋಲಾರ್ ವಿದ್ಯುತ್ ಉಪಕರಣಗಳನ್ನು ಮತ್ತು ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಲಾಗುವುದೇ? | ಸುವರ್ಣ ವಿಧಾನಸೌಧದ ನಿರ್ವಹಣಾ ವೆಚ್ಚಗಳನ್ನು ತಗ್ಗಿಸಲು 2015-16ನೇ ಸಾಲಿನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ ಲೋಕೋಪಯೋಗಿ ಇಂಜಿನಿಯರ್ ವಿದ್ಯುತ್ ವಿಭಾಗ ಬೆಂಗಳೂರು ಇವರ ವತಿಯಿಂದ ಅನುಷ್ಠಾನಗೊಳಿಸಲ್ಪಡುವ ರೂ.250.00 ಲಕ್ಷಗಳ ಅಂದಾಜು ಮೊತ್ತದ ಸೋಲಾರ ವಿದ್ಯುತ ಉಪಕಾರಣಗಳನ್ನು ಅಳವಡಿಸುವ ಕಾಮಗಾರಿಯು ಅನುಮೋದನೆಯಾಗಿದ್ದು ರೂ.216.00 ಲಕ್ಷಗಳ ಟೆಂಡರ ಮೊತ್ತಕ್ಕೆ ಗುತ್ತಿಗೆಯನ್ನು ನಿಗದಿಪಡಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>ಈಗಾಗಲೇ ಸುವರ್ಣವಿಧಾನಸೌಧ ಕಟ್ಟಡದಲ್ಲಿ ಮಳೆನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಲಾಗಿರುತ್ತದೆ. |

ಸಂಖ್ಯೆ: ಲೋಇ 19 ಬಿಎಲ್‌ಕ್ಯೂ 2018

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು.